ಬೆಂಗಳೂರು ಮಹಾನಗರ ಪಾಲಿಕೆ ಆರಂಭಿಸಿರುವ G.I.S ಸರ್ವೆ ವ್ಯಾಪ್ತಿ

2665 (3268) ಶ್ರೀ ಅಶೋಕ್ ಆರ್. (ಉತ್ತರಹಳ್ಳಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆ ಆರಂಭಿಸಿರುವ ಜಿ.ಐ.ಎಸ್. ಸರ್ವೆ ಕಾರ್ಯ ವ್ಯಾಪ್ತಿಯನ್ನು ವಿವರಿಸುವುದು?

ಆ) ಈ ರೀತಿಯ ಸರ್ವೆ ಈಗಾಗಲೇ ಆಗಿದ್ದ ನಗರಪಾಲಿಕೆಗೆ ಬೇಕಾಗಿರುವ ದಾಖಲೆಗಳು ಲಭ್ಯವಿದ್ದು ಮತ್ತು ಅದೇ ದಾಖಲೆ ತಯಾರಿಸಲು ಹೊರಟಿರುವುದು ನಿಜವೆ;

ಇ) ಈ ರೀತಿಯ ಜಿ.ಐ.ಎಸ್. ಸರ್ವೆ ಕಾರ್ಯಕ್ಕಾಗಿ ಖರ್ಚು ಮಾಡುತ್ತಿರುವ ಹಣವೆಷ್ಟು (ವಿವರ ನೀಡುವುದು)

ಈ) ಈ ಕಾರ್ಯವನ್ನು ಯಾರು ಯಾರಿಗೆ ವಹಿಸಿದೆ? (ವಿವರ ನೀಡುವುದು)

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಜಿ.ಐ.ಎಸ್. ಕಾರ್ಯ ಪ್ರಾರಂಭಿಸಿಲ್ಲ. ಆದಾಗ್ಯೂ, ಬೆಂಗಳೂರು ಅಜೆಂಡಾಟಾಸ್ಕ್ ಫೋರ್ಸ್ ವತಿಯಿಂದ ಪ್ರಯೋಗಾತ್ಮಕವಾಗಿ ವಾರ್ಡ್ 76ನ್ನು ಸರ್ವೆಗೆತೆಗೆದುಕೊಳ್ಳಲಾಗಿದ್ದು, ಇದು ಮುಕ್ತಾಯ ಹಂತದಲ್ಲಿದೆ. ಇದರ ಫಲಿತಾಂಶ ಬಂದ ನಂತರ ಅಗತ್ಯವಾದಲ್ಲಿ, ಉಳಿದ ವಾರ್ಡ್‌ಗಳಲ್ಲೂ ಜಿ.ಐ.ಎಸ್. ಕೈಗೊಳ್ಳಲು ಪ್ರಯತ್ನಿಸಲಾಗುವುದು.

ಆ) - ಅನ್ವಯಿಸುವುದಿಲ್ಲ-

ಇ) - ಅನ್ವಯಿಸುವುದಿಲ್ಲ-

ಈ) ಮೇಲಿನ (ಅ)ರಲ್ಲಿ ಉತ್ತರಿಸಿರುವಂತೆ

ಬೆಂಗಳೂರಿನ ಈಜಿಪುರ ಹಾಗೂ ಸುತ್ತಮುತ್ತಲಿನ ಪ್ರದೇಶಕ್ಕೆ ನಾಗರೀಕ ಸೌಲಭ್ಯ

2666 (3475) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಈಜಿಪುರದ ಹಾಗೂ ಸುತ್ತ ಮುತ್ತಲಿನ ಪ್ರದೇಶಕ್ಕೆ ಯಾವುದೇ ಆಟದ ಮೈದಾನ ಹಾಗೂ ಉದ್ಯಾನ ವನಗಳಾಗಲೀ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಪ್ರದೇಶವನ್ನು ಬೆಂಗಳೂರು ಮಹಾನಗರ ಪಾಲಿಕೆಯವರು 1996ರಲ್ಲಿಯೇ ವಶಕ್ಕೆ ತೆಗೆದುಕೊಂಡಿದ್ದರೂ ಈ ಪ್ರದೇಶವನ್ನು ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸದಿರಲು ಕಾರಣಗಳೇನು?

ಇ) ಈಗಲಾದರೂ ಈ ಪ್ರದೇಶಕ್ಕೆ ನಾಗರೀಕ ಸೌಲಭ್ಯದ (ಸಿವಿಕ್ ಅಮೆನಿಟಿ) ನಿವೇಶನಗಳನ್ನು ಒದಗಿಸಲು ಹಲವಾರು ಖಾಲಿ ಇರುವ ನಿವೇಶನ ಪ್ರದೇಶಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದೇ?